ವಿಷಯ : - ರಾಜ್ಯದಲ್ಲಿರುವ ಡಿವಿಜನಲ್ ಕಮಿಷನರ್ ಮತ್ತು ಅಸಿಸ್ಟೆಂಟ್ ಕಮಿಷನರ್ ಹುದ್ದೆಗಳನ್ನು ರದ್ದುಪಡಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 356(639)

ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ವಿಭಾಗಾಧಿಕಾರಿಗಳು ಮತ್ತು ಸಹಾಯಕಾಧಿಕಾರಿಗಳು (ಡಿವಿಜನಲ್ ಕಮಿಷನರ್ ಮತ್ತು ಅಸಿಸ್ಟೆಂಟ್ ಕಮಿಷನರ್) ಹುದ್ದೆಗಳನ್ನು ರದ್ದುಪಡಿಸುವ ಯೋಜನೆ ಈ ಸರ್ಕಾರಕ್ಕೆ ಇದೆಯೇ?

ಆ) ಇದ್ದಲ್ಲಿ, ಈ ಹುದ್ದೆಗಳನ್ನು ಯಾವಾಗ ರದ್ದುಪಡಿಸಲಾಗುವುದು

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು)

ಇಲ್ಲ

ಉದ್ಭವಿಸುವುದಿಲ್ಲ

ವಿಷಯ : - ಗದಗ್ ತಾಲ್ಲೂಕಿನಲ್ಲಿರುವ ತಿಮ್ಮಾಪುರ ಹಾಗೂ ಲಕ್ಕುಂಡಿಯಲ್ಲಿ ಕುಡಿಯುವ ನೀರಿನ ಯೋಜನೆ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ 357(577)

ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗದಗ್ ತಾಲ್ಲೂಕಿನಲ್ಲಿ ತಿಮ್ಮಾಪುರ ಲಕ್ಕುಂಡಿಯಲ್ಲಿ ಕುಡಿಯುವ ನೀರಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಯೋಜನೆಯೊಂದನ್ನು ಪ್ರಾರಂಭಿಸಲಾಗಿದೆಯೇ?

ಇ)ಯಾವಾಗ ಈ ಕಾಮಗಾರಿಯನ್ನು ಪೂರ್ತಿಗೊಳಿಸಲಾಗುವುದು?

ಈ) ಮುಂಡರಗಿ ತಾಲ್ಲೂಕಿನಲ್ಲಿ ಹಳ್ಳಿಗುಡಿ, ಹಳ್ಳಿಕೆರೆ, ವೆಂಕಟಾಪುರ, ಎಕಲಾಸಪುರ, ಹೈತಾಪುರ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ತಿಮ್ಮಾಪುರ ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಲಕ್ಕುಂಡಿ ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆ ಇಲ್ಲ.

ಹೌದು-

ಫೆಬ್ರವರಿ 1994

ಈ ಹಳ್ಳಿಗಳಿಗೆ ಪ್ರತ್ಯೇಕ ನೀರು ಸರಬರಾಜು ಯೋಜನೆಗಳಿವೆ. ಆದರೆ ಜಲಮೂಲದ ನೀರು

ಹೆಚ್ಚು ಪ್ರಮಾಣ ಫ್ಲೋರೈಡ್ ಹೊಂದಿರುತ್ತದೆ. ಆದುದರಿಂದ ಹಳ್ಳಿಗುಡಿ ಗ್ರಾಮದಿಂದ 8 ಕಿಲೋ ಮೀಟರ್ ದೂರದಲ್ಲಿರುವ ಜಂಟಿ-ಶಿರೂರ್ ಗ್ರಾಮದ ಹತ್ತಿರ ಕೊಳವೆಬಾವಿಗಳನ್ನು ಕೊರೆದು ನೀರು ಸರಬರಾಜು ಮಾಡುವ ಪ್ರಸ್ತಾವನೆ ಇದೆ. ಇದರ ಅಂದಾಜು ಮೊತ್ತ 8ಲಕ್ಷ ರೂಪಾಯಿ ಆಗುತ್ತದೆ ಮತ್ತು ಈ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ವಿಷಯ : - ನವೆಂಬರ್ ತಿಂಗಳಿನಲ್ಲಿ ಆದ (1992ರಲ್ಲಿ) ಚಂಡಮಾರುತದ ಪರಿಹಾರದ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 358(576)

ಶ್ರೀ ಕೆ.ಹೆಚ್. ಕುರಡಗಿ(ಮುಂಡರಗಿ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನವೆಂಬರ್ 1992ರಲ್ಲಿ ಚಂಡಮಾರುತದಿಂದ ಮುಂಡರಗಿ ತಾಲ್ಲೂಕಿನ ಹಳ್ಳಿಗಳಿಗೆ ನೀರು ನುಗ್ಗಿದೆ ಕಾರಣ ಬಿದ್ದುಹೋದ ಮನೆಗಳಿಗೆ ಕೊಟ್ಟ ಪರಿಹಾರದ ಹಣವೆಷ್ಟು; ಅದರಲ್ಲಿ ದುರುಪಯೋಗವೇನಾದರೂ ಆಗಿದೆಯೇ; ಹಾಗಿದ್ದಲ್ಲಿ ಅದರ ಮೊಬಲಗೆಷ್ಟು ದುರುಪಯೋಗ ಮಾಡಿದವರ ಮೇಲೆ ಕ್ರಮವನ್ನೇನಾದರೂ ಕೈಗೊಳ್ಳಲಾಗಿದೆಯೇ ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು;

ಆ) ಈ ಚಂಡಮಾರುತದಿಂದ ಸಾವಿಗೀಡಾದ ಕುರಿ, ಆಡು, ದನಕರುಗಳಿಗೆ ಇದುವರೆವಿಗೂ ಪರಿಹಾರ ಮಂಜೂರು ಮಾಡದಿರುವುದಕ್ಕೆ ಕಾರಣವೇನು; ಪರಿಹಾರದ ಹಣವನ್ನು ಯಾವಾಗ ಮಂಜೂರು ಮಾಡಲಾಗುವುದು;

ಇ) ಸದರಿ ಚಂಡಮಾರುತದಿಂದ ಹಾನಿಗೊಳಗಾದ ಬಾವಿ, ಮತ್ತು ಪಂಪ್‌ಸೆಟ್ಟುಗಳಿಗೆ ಬೆಳೆಗಳಿಗೆ ಇದುವರೆಗೂ ಪೂರ್ತಿ ಹಣ ಬಿಡುಗಡೆ ಮಾಡದಿರುವುದು ನಿಜವೇ, ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು, ಪೂರ್ಣ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು;

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು)

ಮುಂಡರಗಿ ತಾಲ್ಲೂಕಿನಲ್ಲಿ ಪೂರ್ಣ ಬಿದ್ದ ಮನೆಗಳ ಸಂಖ್ಯೆ -939. ಕಟ್ಟಡ ಸಾಮಗ್ರಿಗಳೂ ಸೇರಿದಂತೆ ಪೂರ್ಣ ಬಿದ್ದ ಮನೆಗಳಿಗೆ ನೀಡಿರುವ ಪರಿಹಾರ 50.35 ಲಕ್ಷ. ರೂ.ಗಳು. ಭಾಗಶಃ ಬಿದ್ದ ಮನೆಗಳ ಸಂಖ್ಯೆ-8,295. ಇದಕ್ಕೆ ನೀಡಿದ ಪರಿಹಾರ ಧನ 49.20 ಲಕ್ಷ ರೂ.ಗಳು. ಪರಿಹಾರ ಧನ ದುರುಪಯೋಗವಾಗಿರುವ ಬಗ್ಗೆ ವರದಿಯಿರುವುದಿಲ್ಲ. ಆದಾಗ್ಯೂ, ಸಂತ್ರಸ್ತರಿಗೆ ನೀಡಿದ ಪರಿಹಾರ ಸದುಪಯೋಗ ಮಾಡಿಕೊಂಡಿದ್ದಾರೆಯೇ ಹೇಗೆ ಎಂಬ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಉಪಕಾರ್ಯದರ್ಶಿ-1, ಜಿಲ್ಲಾಪಂಚಾಯತ್‌ಸಮಿತಿ, ಧಾರವಾಡ-ಇವರಿಗೆ ತಿಳಿಸಲಾಗಿದೆ.

ಚಂಡಮಾರುತದಿಂದ ಸಾವಿಗೀಡಾದ 521 ಜಾನುವಾರುಗಳಿಗೆ (ಅಂದರೆ ಕುರಿ, ಆಡು, ದನಕರುಗಳು) ಇವುಗಳ 89 ಜನ ಸಂತ್ರಸ್ತರಿಗೆ 1.49 ಲಕ್ಷ ರೂ.ಗಳನ್ನು ಈಗಾಗಲೇ ಪರಿಹಾರ ಧನವಾಗಿ ವಿತರಿಸಲಾಗಿದೆ.

ಮುಂಡರಗಿ ತಾಲ್ಲೂಕಿನಲ್ಲಿ 563 ಪಂಪ್‌ಸೆಟ್‌ಗಳು ಹಾನಿಯಾಗಿದ್ದು, ಪರಿಹಾರ ನೀಡಲು 5.63 ಲಕ್ಷ ರೂ.ಗಳನ್ನು ಜಿಲ್ಲಾಧಿಕಾರಿಯವರು ತಹಶೀಲ್ದಾರ್, ಮುಂಡರಗಿ-ಇವರಿಗೆ ಬಿಡುಗಡೆ ಮಾಡಿದ್ದಾರೆ. ಈ ಹಣವನ್ನು ನೊಂದ ಸಂತ್ರಸ್ತರಿಗೆ ವಿತರಣೆ ಮಾಡಲು ತಹಶೀಲ್ದಾರ್ ಕ್ರಮ ಕೈಗೊಂಡಿರುತ್ತಾರೆ. ಬೆಳೆ ಹಾನಿ ಬಗ್ಗೆ ಸಂತ್ರಸ್ತರಿಗೆ ಕೃಷಿ ಸಾಮಗ್ರಿಗಳನ್ನು ಒದಗಿಸಲು ಪ್ರಧಾನ ಕೃಷಿ